

## ಕಣ್ಮರೆಯಾದ ತತ್ರಾಣಿ

ತತ್ರಾಣಿ ನಮ್ಮ ನಾಡಿನ ಗ್ರಾಮೀಣರ ಪಾಲಿಗೆ ತಂಪಾದ ನೀರುಣಿಸುವ ಸಂಚಾರಿ ರೆಫ್ರಿಜಿರೇಟರ್ ಆಗಿತ್ತು. ಬದಲಾದ ದಿನಗಳಲ್ಲಿ ಪ್ಲಾಸ್ಟಿಕ್ ರಾಕ್ಷಸನ ಹಾವಳಿಯಿಂದ ಬಾಟಲಿಗಳು ತತ್ರಾಣಿಯ ಸ್ಥಾನವನ್ನು ಅದರ ನೀರಿನ ರುಚಿಯನ್ನೂ ಕಿತ್ತುಕೊಂಡಿವೆ. ಕುಂಬಾರರ ತಿಗರಿಯಲ್ಲಿ ಕಲಾತ್ಮಕವಾಗಿ ಅರಳುತ್ತಿದ್ದ ತತ್ರಾಣಿಗಳು ಈಗ ಕಾಣೆಯಾಗಿವೆ.

–ನಾಗರಾಜನಾಯಕ ಡಿ. ಡೊಳ್ಳಿನ, ಕೊಪ್ಪಳ



## ಕಾಣೆಯಾದ ಗೋಕಲ್ಲು

ಮಲೆನಾಡಿನಲ್ಲಿ ಹಿಂದೆ ಗುಡ್ಡ ಬೆಟ್ಟಗಳಲ್ಲಿ ಗ್ರಾಮಸ್ಥರು ಇಂತಹ ಗೋಕಲ್ಲುಗಳನ್ನು ನಿಲ್ಲಿಸುತ್ತಿದ್ದರು. ತಾವು ಸಾಕಿದ ಜಾನುವಾರುಗಳನ್ನು ಮೇಯಲು ಹೊರಗಡೆ ಬಿಟ್ಟಾಗ ಜಾನುವಾರುಗಳು ತಮ್ಮ ದೇಹದ ನವೆ(ತುರಿಕೆ) ನೀಗಿಸಿಕೊಳ್ಳಲು ಈ ಗೋಕಲ್ಲುಗಳನ್ನು ಆಶ್ರಯಿಸುತ್ತಿದ್ದವು. ಆದರೀಗ ಮಲೆನಾಡಿನಲ್ಲಿ ಇಂತಹ ಗೋಕಲ್ಲುಗಳು ಮರೆಯಾಗಿದೆ. ಇಂದಿನ ಯುವಪೀಳಿಗೆ ಹಾಗೂ ಮಕ್ಕಳಿಗೆ ಗೋಕಲ್ಲಿನ ಮಹತ್ವ ಅರಿಯದಂತಾಗಿದೆ. ಆದರಿಂದು ಗೋಕಲ್ಲುಗಳು ಮಲೆನಾಡಿಗರಿಗೆ ನೆನಪು ಮಾತ್ರ.

–ರಾಂಚಂದ್ರ ಕೊಪ್ಪಲು,
ತೀರ್ಥಹಳ್ಳಿ



## ರಥ ಯಾತ್ರೆಯ ಪುರಾತನ ಶಿಲ್ಪ

ಪ್ರತಿ ವರ್ಷ ಆಷಾಢ ಶುಕ್ಲ ಬಿದಿಗೆಯಂದು ಒಡಿಶಾ ರಾಜ್ಯದ ಪುರಿಯಲ್ಲಿ ಜರುಗುವ ರಥ ಯಾತ್ರೆ ಇಡೀ ವಿಶ್ವದಲ್ಲಿಯೇ ಪುರಾತನ ಉತ್ಸವ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಬ್ರಹ್ಮ ಪುರಾಣ, ಪದ್ಮ ಪುರಾಣ, ಸ್ಕಂದ ಪುರಾಣ ಹಾಗೂ ಕಪಿಲ ಸಂಹಿತೆ ಇವುಗಳಲ್ಲಿ ಈ ಉತ್ಸವದ ಉಲ್ಲೇಖವಿದೆಯಂತೆ. ಬಲಭದ್ರ, ಸುಭದ್ರ, ಮತ್ತು ಜಗನ್ನಾಥರ ವಿಗ್ರಹಗಳನ್ನು ಮೂರು ಸಾಲಂಕೃತ ರಥಗಳಲ್ಲಿ ಮೆರವಣಿಗೆಯಲ್ಲಿ ಕೊಂಡೊಯ್ಯುವ ಈ ಯಾತ್ರೆಯಲ್ಲಿ ಲಕ್ಷಾಂತರ ಭಕ್ತರು ಪಾಲ್ಗೊಳ್ಳುತ್ತಾರೆ. ಇತ್ತೀಚಿನ ದಶಕಗಳ ರಥ ಯಾತ್ರೆಯ ವೈಭವದ ದೃಶ್ಯಗಳನ್ನು ಬಹುತೇಕರು ಮಾಧ್ಯಮಗಳಲ್ಲಿ ನೋಡಿರುತ್ತೀರಿ. ಆದರೆ, ಹದಿಮೂರು ಶತಮಾನಗಳ ಹಿಂದೆ ಈ ಉತ್ಸವ ಅತ್ಯಂತ ಸರಳವಾಗಿ ನಡೆಯುತ್ತಿತ್ತು ಎಂಬುದನ್ನು ಕ್ರಿಸ್ತ ಶಕ ಎಂಟನೆಯ ಶತಮಾನದ ಈ ಪುರಾತನ ಶಿಲ್ಪ ಸೂಚಿಸುತ್ತದೆ. ಭುವನೇಶ್ವರದ ಸಂಗ್ರಹಾಲಯದಲ್ಲಿ ಈ ಶಿಲ್ಪ ಕಲಾಕೃತಿಯನ್ನು ಸಂರಕ್ಷಿಸಿಡಲಾಗಿದೆ.

–ಮಂಜುನಾಥ. ಡಿ.ಎಸ್, ಬೆಂಗಳೂರು